(7) ಹಿರೇಕೆರೂರ್ ತಾಲ್ಲೂಕಿನಲ್ಲಿ ರಸ್ತೆಗಳಿಗೆ ಮೆಟಲಿಂಗ್.

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರ್) :- ಮಾನ್ಯ ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ ಅನೇಕ ಜಿಲ್ಲಾ ಪಂಚಾಯತಿಗಳ ಮೆಟಲಿಂಗ್ ರಸ್ತೆಗಳು ನಾದುರಸ್ತಿಯಾಗಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದು ಬಸ್ಸುಗಳು, ಟ್ಯಾಕ್ಟರ್‌ಗಳು ಜಕ್ಕಡಿಗಳು ಅಡ್ಡಾಡದ ಹಾಗೆ ಆಗಿವೆ. ಉದಾಹರಣೆಗೆ 1) ಹಿರೇಕೆರೂರು ಪರಹ ಮಾನೂರು 2) ಹಿರೇಕೆರೂರು ಸೋಮನಹಳ್ಳಿ ನೂಲಗೇರಿ 3) ಹಿರೇಕೆರೂರು ಹಿರೇ ಮತ್ತೂರ ಹುಲ್ಲಲ್ಲಿ ನೆಪ್ಪಿ 4) ತಿಮ್ಮನಕಟ್ಟಿ ಬಳ್ಳಾಪುರ 5) ಹೊಸಕಟ್ಟಿ ಗುಡ್ಡದ ಮಾಪುರ, ಇಲ್ಲಿ ರಸ್ತೆಗಳು ದುರಸ್ತಿಯಾಗಿದೆ ಇರುವುದರಿಂದ ಕೂಡಲೇ ಯಾವುದಾದರೂ ಒಂದು ಯೋಜನೆಯಲ್ಲಿ ಈ ರಸ್ತೆಗಳನ್ನು ಮೆಟಲಿಂಗ್ ಮಾಡಿ ಸಂಚಾರಕ್ಕೆ ಯೋಗ್ಯವಾಗುವಂತೆ ಮಾಡಲು ಅಧಿಕಾರಿಗಳಿಗೆ ಆದೇಶ ಕೊಡುವಂತೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ಈ ವಿಷಯ ತಿಳಿಸಿ ಸೂಕ್ತ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಕಳುಹಿಸುತ್ತೇವೆ.

(8) ಕನಕಪುರ ತಾಲ್ಲೂಕ್ ಎಳಗಳ್ಳಿ ಗ್ರಾಮದಲ್ಲಿ ಕೊಲೆಯಾಗಿದ್ದರೂ ಚಾರ್ಜ್‌ಶೀಟ್ ಹಾಕದೇ ಇರುವುದರ ಕುರಿತು.

ಶ್ರೀ ಡಿ. ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕು ಸಾತನೂರು ಸ್ಟೇಷನ್ ವ್ಯಾಪ್ತಿಯಲ್ಲಿ ಎಳಗಳ್ಳಿ ಗ್ರಾಮದ ಸಿದ್ದಯ್ಯನ ಮಗ ರಂಗ ಎಂಬುವವರನ್ನು ಅದೇ ಗ್ರಾಮದ ಕೆಂಪೇಗೌಡ ಉರುಫ್ ದೊಡ್ಡಣ್ಣ ಮತ್ತು ಇತರೇ 9 ಮಂದಿ ಕೊಲೆ ಮಾಡಿದ್ದು ಅವರ ಮೇಲೆ ಸಾತನೂರು ಪೋಲೀಸ್ ಠಾಣೆ ಕ್ರೈಮ್ ನಂ : 65 : 95 ಮೊಕದ್ದಮೆ ದಾಖಲಾಗಿದ್ದು ಐಪಿಸಿ ಸೆಕ್ಷನ್ 302, 201 ರ ಮೇರೆಗೆ ಇಲ್ಲಿಯವರೆಗೂ ಅವರನ್ನು ಬಂಧಿಸದೇ ಮತ್ತು ಚಾರ್ಜ್ ಸೀಟು ಹಾಕದೇ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಇವರ ಕುಟುಂಬಕ್ಕೆ ಕಳೆದ ಒಂದೂವರೆ ವರ್ಷ ವಾದರೂ ಪರಿಹಾರ ಕೊಡದೆ ಮತ್ತು ನ್ಯಾಯ ಒದಗಿಸಿಕೊಡದೇ ಇಂತಹ ಅನೇಕ ಹರಿಜನ ಗಿರಿಜನರಿಗೆ ನಮ್ಮ ಕ್ಷೇತ್ರದಲ್ಲಿ ರಕ್ಷಣೆ ಇಲ್ಲದ ರೀತಿ ಆಗಿದೆ. ಆದ್ದರಿಂದ ಇದರ ಬಗ್ಗೆ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಮಾನ್ಯ ಗೃಹಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಮಾನ್ಯ ಸದಸ್ಯರ ಹತ್ತಿರ ಮಾತನಾಡಿದ್ದೇನೆ. ಏನು ಅಲ್ಲಿ ಕೊಲೆ ಆಗಿದೆಯೆಂದು ಹೇಳುತ್ತಿದ್ದಾರೆ ಅಲ್ಲಿಗೆ ಡಿಎಸ್‌ಪಿ ಲೆವೆಲ್ ಅಧಿಕಾರಿಯನ್ನು ಕಳುಹಿಸಿ

ಸ್ಪೆಷಲ್ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ಅವರಿಂದ ಸ್ಪೆಷಲ್ ಇನ್‌ವೆಸ್ಟಿಗೇಷನ್ ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

(9) ಬಾದಾಮಿ ತಾಲ್ಲೂಕನ್ನು ಕಾಲರಾರೋಗ ಹಬ್ಬದಂತೆ ಮುಂಜಾಗ್ರತಾ ಕ್ರಮ.

ಶ್ರೀ ಬಿ. ಬಿ. ಚಿಮನಕಟ್ಟಿ(ಬಾದಾಮಿ) :- ಮಾನ್ಯ ಅಧ್ಯಕ್ಷರೇ, ಬಾದಾಮಿ ತಾಲ್ಲೂಕು ಮುತ್ತಲಗೇರಿ ಅನವಾಲ್ ಕೆರೂರು ಗ್ರಾಮಗಳಲ್ಲಿ ಹಾಗೂ ಇನ್ನಿತರೇ ಗ್ರಾಮಗಳಲ್ಲಿ ಕಾಲರ ಬೇನೆ ಹಬ್ಬಿ ಇಬ್ಬರು ಮೃತರಾಗಿದ್ದು ತಾಲ್ಲೂಕಿನ ಅನೇಕ ಜನ ಗ್ರಾಮಸ್ಥರು ಈ ರೋಗದಿಂದ ಬಳಲುತ್ತಿದ್ದು, ಆಸ್ಪತ್ರೆಗೆ ಸೇರಿದ್ದಾರೆ. ತಾಲ್ಲೂಕಿನ ಜನ ಭಯ ಭೀತಿಯಿಂದ ಜೀವಿಸುತ್ತಿದ್ದು ಈ ಕಾಲರ ರೋಗ ಇನ್ನೂ ಅನೇಕ ಗ್ರಾಮಗಳಿಗೆ ವ್ಯಾಪಿಸುವ ಸಂಭವವಿದ್ದು ಸರ್ಕಾರ ಸುಮಾರು 8 ದಿನಗಳಿಂದ ಈ ರೋಗ ಉಲ್ಬಣ ಗೊಂಡರೂ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಇರುವುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಕೆರೂರು ಗ್ರಾಮಗಳಲ್ಲಿ ಯಾವುದೇ ಕರಳುಬೇನೆ ಹಬ್ಬಿರುವ ವರದಿಗಳು ಇರುವುದಿಲ್ಲ. ಆದರೆ, ಮುತ್ತಲಗೇರಿ ಗ್ರಾಮದಲ್ಲಿ 2 ಪ್ರಕರಣಗಳು ದಾಖಲಾಗಿದ್ದು, ಒಂದು ಪ್ರಕರಣ ದಲ್ಲಿ ರೋಗಿಯು ಖಾಸಗಿ ವೈದ್ಯರಿಂದ ಚಿಕಿತ್ಸೆ ಪಡೆದರೂ ರೋಗ ಉಲ್ಬಣಗೊಂಡು ಮೃತಪಟ್ಟಿದ್ದಾನೆ. ಇನ್ನೊಂದು ಪ್ರಕರಣದಲ್ಲಿ ಸಕಾಲ ಚಿಕಿತ್ಸೆಯಿಂದ ರೋಗಿಯು ಗುಣ ಮುಖಿಹೊಂದಿರುತ್ತಾನೆ. ಈ ಎಲ್ಲಾ ಗ್ರಾಮಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿಯವರು ಭೇಟಿ ನೀಡಿದ್ದು, ಈ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರಿನಲ್ಲಿ ಉಪಯೋಗಿಸಲು ಹಾಲೋಜನ್ ಮಾತ್ರೆಗಳನ್ನು (ಕ್ಲೋರಿನೇಷನ್‌ಗಾಗಿ) ಕೊಡಲಾಗಿದೆ. ಮತ್ತು ಒ.ಆರ್.ಎಸ್. ಪಾಕೇಟ್ ಗಳನ್ನೂ ಕೂಡ ಕೊಡಲಾಗಿದೆ. ಈ ಪ್ರದೇಶಗಳಲ್ಲಿ ಡಿಸ್‌ಇನ್‌ಫೆಕ್ಷನ್ ಮಾಡಲಾಗಿದೆ. ಮತ್ತು ಈಗಾಗಲೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚನೆ ನೀಡಿ ಈ ಪ್ರದೇಶಗಳ ಮೇಲೆ ನಿಗಾ ಇಡಲು ಮತ್ತು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

(5) ಗಮನ ಸೆಳೆಯುವ ಸೂಚನೆ

ವಿಷಯ :- ಹೊಸಪೇಟೆ ಬಳಿ ಇರುವ ಶ್ರೀ ಜಂಭುನಾಥ ಸ್ವಾಮಿ ದೇವಸ್ಥಾನದಲ್ಲಿ ಸ್ಫೋಟದಿಂದ ಬರುಕು.